**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**
**ಸಿ.ಸಿ ನಂ. 09/2024**

ಪಿರ್ಯಾದಿದಾರರುಃ ವಿರುದ್ಧ ಆರೋಪಿತರು

ಸರಕಾರದ ಪರವಾಗಿ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆ.

1) ಪ್ರವೀಣ .ಪಿ.ಬಿ. ತಂದೆ ಬಸವರಾಜಪ್ಪ,
ವಃ 29 ವರ್ಷ, ಕೂಲಿ,
ವಾಸಃ 2 ನೇ ಕ್ರಾಸ್, ಎ.ಕೆ. ಕಾಲೋನಿ,
2 ನೇ ಕ್ರಾಸ್, ಆಶ್ರಯ ಕಾಲೋನಿ,
ಹರಿಹರ ಟೌನ್, ದಾವಣಗೆರೆ.

2) ಅನಿಲ್‌ಕುಮಾರ ತಂದೆ ದಂಡೆಪ್ಪ,
ವಃ 28 ವರ್ಷ,
ವಾಸಃ ಬನ್ನಿಕೋಡು ಗ್ರಾಮ,
ಹರಿಹರ ತಾಲ್ಲೂಕು, ದಾವಣಗೆರೆ.

ದಂಡ ಪ್ರಕ್ರಿಯಾ ಕಲಂ **313** ರ ಅಡಿ ಆರೋಪಿತರ ಹೇಳಿಕೆ

ಪ್ರಶ್ನೆಃ 1 ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ ಆ.1:

ಆ.2:

ಪ್ರಶ್ನೆಃ 2 ಫ್ರಾಸಾ.1 ಪ್ರಕಾಶ ದಿವಾಟೆ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1 ರವರ ಪರಿಚಯವಿದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ.1 ಎಂದು ಅದರಲ್ಲಿರುವ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಕಚ್ಚಾ ನಕಾಶೆಯಾಗಿದ್ದು ಅದನ್ನು ನಿಪಿ.2 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.2 (ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಆಗಸ್ಟ 2023 ರಂದು ದಾವಣರೆಗೆಯಿಂದ ಕೆಲಸ ಮುಗಿಸಿಕೊಂಡು ಹರಿಹರಕ್ಕೆ ಬರುತ್ತಿರುವಾಗ ಹರಿಹರದ ಕಡೆಗೆ ಇರುವ ಬೈಪಾಸ್ ಬ್ರಿಡ್ಜ್ ಹತ್ತಿರ ಮೊಬೈಲ್ ಕಳುವಾದ ವಿಚಾರಕ್ಕೆ ಸಹಿ ಮಾಡಿರುತ್ತೇನೆ. ಸದರಿ ಕಾಲಕ್ಕೆ ಛಾಯಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರವನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಸಂದರ್ಭದಲ್ಲಿ ಸಂಜೆ 6.00 ಗಂಟೆಯಾಗಿತ್ತು ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಪ್ರಶ್ನೆಃ 3 ಪ್ರಾಸಾ.4 ಕಾರ್ತಿಕ್ ಇವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು 2 ವರ್ಷಗಳ ಹಿಂದೆ ತಾನು ತನ್ನ ತಂದೆಯೊಂದಿಗೆ ಜಗಳ ಮಾಡಿಕೊಂಡು ರಾತ್ರಿ ಸುಮಾರು 10.30 ಗಂಟೆಗೆ ಶಿವಮೊಗ್ಗ ಹರಿಹರ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ, ತನ್ನ ಎದುರುಗಡೆಯಿಂದ ಒಂದು ಬೈಕ್ ಮೇಲೆ ಇಬ್ಬರು ವ್ಯಕ್ತಿಗಳು ಬಂದು ತನ್ನ ಬಲಗೈಯಲ್ಲಿದ್ದ ಒನ್ ಪ್ಲಸ್ ನಾರ್ಡ ಸಿಇ 2 5 ಜಿ ಮೊಬೈಲನ್ನು ಕಿತ್ತುಕೊಂಡು ಹೋದರು. ಮೊಬೈಲನ್ನು ಕಿತ್ತುಕೊಳ್ಳುವ ಸಮಯದಲ್ಲಿ ತನ್ನ ಮುಖಕ್ಕೆ ಮೊಬೈಲ್ ಬಡಿದು ಸ್ವಲ್ಪ ಪೆಟ್ಟು ಬಿದ್ದ ಹಾಗೆ ಆಯಿತು. ತಾನು ಸದರಿ ವ್ಯಕ್ತಿಗಳನ್ನು ನೋಡುವಷ್ಟರಲ್ಲಿ ಅವರು ಅಲ್ಲಿಂದ ಹೊರಟು ಹೋಗಿದ್ದರು. ಅವರು ಕುಳಿತಿದ್ದ ಬೈಕ್ ಕಪ್ಪು ಬಣ್ಣದಿದ್ದು, ಪ್ಯಾಶನ್ ಪ್ರೊ ಅಥವಾ ಸ್ಪೈಲಂಡರ್ ಪ್ಲಸ್ ಆಗಿರಬಹುದು. ಮೊಬೈಲನ್ನು ಬೈಕ್‌ನಲ್ಲಿ ಹಿಂದೆ ಕುಳಿತ ವ್ಯಕ್ತಿ ಕಿತ್ತುಕೊಂಡನು. ತಾನು ಮನೆಗೆ ಹೋಗಿ ವಿಚಾರ ತಿಳಿಸಿ ಅದೇ ದಿನ ರಾತ್ರಿ 12 ಗಂಟೆ ಸುಮಾರಿಗೆ ಹರಿಹರ ಗ್ರಾಮಾಂತರ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸಿರುತ್ತಾರೆ, ಸದರಿ ದಾಖಲೆ ದೂರು ಆಗಿದ್ದು ಅದನ್ನು ನಿಪಿ.12 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 12(ಎ) ಎಂದು ಗುರುತಿಸಲಾಯಿತು. ಮಾರನೇ ದಿನ ಮಧ್ಯಾಹ್ನ ಪೋಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಜರುಗಿಸಿ ತನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಗುರುತಿಸಿದ ಸ್ಥಳ ಪಂಚನಾಮೆಯನ್ನು ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೋಲೀಸರು ಕಚ್ಚಾನಕಾಶೆ ತಯಾರಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಕಚ್ಚಾನಕಾಶೆಯನ್ನು ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಛಾಯಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿ ಗುರುತಿಸಿದ ಛಾಯಾಚಿತ್ರಗಳನ್ನು 2 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ಪೋಲೀಸರಿಗೆ ತಾನೇ ಘಟನಾ ಸ್ಥಳ ತೋರಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ ತಾನು ತನ್ನ ತಂದೆ ಮತ್ತು ಸ್ಥಳದಲ್ಲಿದ್ದ ಇಬ್ಬರು ಇದ್ದೆವು. ಇದಾದ 2 ದಿನಗಳ ನಂತರ ಪೋಲೀಸರು ತನ್ನನ್ನು ದಾವಣಗೆರೆಯ ಕಾರಾಗೃಹಕ್ಕೆ ಕರೆದುಕೊಂಡು ಹೋಗಿ ಕೆಲವು ಜನರನ್ನು ತೋರಿಸಿದರು ಆದರೆ ತನಗೆ ಯಾರೂ ಗುರುತು ಸಿಗಲಿಲ್ಲ. ಕಳ್ಳರು ಯಾರು ಏನು ಎಂದು ನನಗೆ ಗೊತ್ತಾಗಲಿಲ್ಲ. ನಂತರ 15-20 ದಿನಗಳ ನಂತರ ಪೋಲೀಸರು ಕರೆ ಮಾಡಿ ತನ್ನ ಮೊಬೈಲ್ ಸಿಕ್ಕ ವಿಚಾರ ತಿಳಿಸಿರುತ್ತಾರೆ. ಸದರಿ ಮೊಬೈಲ್ ಪೋಲೀಸರಿಗೆ ಹೇಗೆ ಸಿಕ್ಕಿರುತ್ತದೆ ಎಂದು ತಾನು ಅವರನ್ನು ವಿಚಾರಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಆದರೆ ಸದರಿ ಮೊಬೈಲ್ ತನ್ನದೇ ಎಂದು ನುಡಿಯುತ್ತಾರೆ. ಸದರಿ ಮೊಬೈಲನು ನ್ಯಾಯಾಲಯದ ಆದೇಶದ ಮೇಲೆ ಪಡೆದುಕೊಂಡಿರುತ್ತಾರೆ ಈ ಎಲ್ಲಾ ವಿಚಾರವಾಗಿ ತಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಪ್ರಶ್ನೆಃ 4 ಪ್ರಾಸಾ.5 ಹನುಮಂತಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ, ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸಿರುತ್ತಾರೆ, ಸದರಿ ದಾಖಲೆ ಪಂಚರಿಗೆ ನೀಡಿದ ನೋಟೀಸ್

ಆಗಿದ್ದು ಅದನ್ನು ನಿಪಿ.8 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸಿರುತ್ತಾರೆ, ಸದರಿ ದಾಖಲೆ ಮೊಬೈಲ್ ಅಮಾನತ್ತು ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ.9 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಛಾಯಾಚಿತ್ರಗಳನ್ನು ತೋರಿಸಲಾಗಿ ಸದರಿ ಛಾಯಾಚಿತ್ರಗಳಲ್ಲಿ ತಾವು ಇರುವುದಾಗಿ ಗುರುತಿಸಿರುತ್ತಾರೆ ಅವುಗಳನ್ನು ಈಗಾಗಲೇ ನಿಪಿ. 10 ಮತ್ತು 11 ಎಂದು ಗುರುತಿಸಲಾಗಿದೆ. ಸದರಿ ಸಹಿಗಳನ್ನು ಸುಮಾರು 2 ವರ್ಷಗಳ ಹಿಂದೆ ಹರಿಹರ ಗ್ರಾಮಾಂತರ ಠಾಣೆಯಲ್ಲಿ ಮಾಡಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಪ್ರಶ್ನೆಃ 5 ಫ್ರಾಸಾ.7 ಅರವಿಂದ್ .ಬಿ.ಎಸ್. ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕಃ 14.08.2023 ರಂದು ರಾತ್ರಿ 12.15 ಗಂಟೆಗೆ ಠಾಣೆಯಲ್ಲಿರುವಾಗ ಚಾಸಾ.1 ರವರು ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂ.193/23 ಕಲಂ 392 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಗಂಭೀರ ಸ್ವರೂಪದ ಪ್ರಕರಣವಾಗಿರುವುದರಿಂದ ಮುಂದಿನ ತನಿಖೆಯನ್ನು ಚಾಸಾ.17 ರವರಿಗೆ ವಹಿಸಿಕೊಟ್ಟಿರುತ್ತೇನೆ. ನಂತರ ಚಾಸಾ.17 ರ ನಿರ್ದೇಶನದ ಮೇರೆಗೆ ದಿನಾಂಕಃ 01.10.2023 ರಂದು ಆರೋಪಿತರನ್ನು ಹರಿಹರ ಬೈಪಾಸ್ ಹತ್ತಿರ ವಶಕ್ಕೆ ಪಡೆದುಕೊಂಡು ಬಂದು ಮಧ್ಯಾಹ್ನ 3.45 ಗಂಟೆಗೆ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಪ್ರಶ್ನೆಃ 6 ಫ್ರಾಸಾ.8 ಸುರೇಶ ಸಗರಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ15.08.2023 ರಂದು ಚಾಸಾ.16 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ ಚಾಸಾ.1 ರವರು ತೋರಿಸಿದಂತೆ ಚಾಸಾ.2, 3 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ. ಚಾಸಾ.8 ರವರು ಹಾಜರುಪಡಿಸಿದ ಮೊಬೈಲನ್ನು ಚಾಸಾ.4, 5 ರವರ ಸಮಕ್ಷಮ ಜಪ್ತು ಪಂಚನಾಮೆ ಮಾಡಿರುತ್ತೇನೆ. ಸದರಿ ಸಮಯದಲ್ಲಿ 2 ಫೋಟೋಗಳನ್ನು ತೆಗೆದಿರುತ್ತೇನೆ. ಮು.ಮಾ.ಗಳನ್ನು ಪಿಎಫ್ ನಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಚಾಸಾ.16 ರವರಿಗೆ ಆರೋಪಿತರನ್ನು ಹಾಜರುಪಡಿಸುವಂತೆ ನಿರ್ದೇಶನ ನೀಡಿದ ಮೇರೆಗೆ ಆರೋಪಿತರನ್ನು ದಸ್ತಗಿರಿ ಮಾಡಿ ಸ್ವಮುಷಿ ಹೇಳಿಕೆ ನೀಡಿದ್ದು, ಆರೋಪಿತರು ತಮ್ಮ ಜೊತೆ ಬಂದರೆ ಸುಲಿಗೆ ಮಾಡಲು ಬಳಸಿದ ಮೋಟಾರ್ ಸೈಕಲ್ ಮತ್ತು ಸ್ಥಳ ತೋರಿಸುವುದಾಗಿ ತಿಳಿಸಿರುತ್ತಾರೆ. ಅದರಂತೆ ಚಾಸಾ.6, 7 ರವರ ಸಮಕ್ಷಮ ಆರೋಪಿತರು

ತೋರಿಸಿದಂತೆ ಮೋಟಾರ ಸೈಕಲ್ ಮತ್ತು ಸ್ಥಳ ಪಂಚನಾಮೆ ಮಾಡಿಕೊಂಡಿರುತ್ತೇನೆ. ಸದರಿ ಮೋಟಾರ್ ಸೈಕಲನ್ನು ಠಾಣಾ ಪಿಎಫ್‌ನಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಆರೋಪಿತರು ದಸ್ತಗಿರಿ ಕ್ರಮ ಅನುಸರಿಸಿ ನ್ಯಾಯಾಂಗ ಬಂಧನಕ್ಕೆ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಚಾಸಾ.8 ರಿಂದ 10, 12 ರಿಂದ 16 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ. 13 ರವರಿಂದ 65(ಬಿ) ಪ್ರಮಾಣ ಪತ್ರ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿನಾಂಕಃ 03.10.2023 ರಂದು ಕೆಎ-17 ಹೆಚ್ ಎಂ 5933 ಬೈಕಿನ ಬಿ ಎಕ್ಸಟ್ರಾಕ್ಟ್ ಕೊಡಿಸುವಂತೆ ಆರ್ ಟಿ ಒ ರವರಿಗೆ ಪತ್ರ ಬರೆದಿರುತ್ತೇನೆ. ದಿನಾಂಕ:06.10.2023 ರಂದು ಬಿ ಎಕ್ಸಟ್ರಾಕ್ಟ ನ್ನು ಪೂರೈಸಿದ್ದು ಅದನ್ನು ತಾನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸ್ಥಳದ ನಕಾಶೆಯನ್ನು ಪೂರೈಸುವಂತೆ ಪಿಡಬ್ಲ್ಯೂಡಿ ರವರಿಗೆ ಪತ್ರ ಬರೆದಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಪ್ರಶ್ನೆಃ 7 ಪ್ರಾಸಾ.8 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕಃ 04.10.2023 ರಂದು ಗುರುತಿನ ಕವಾಯತನ್ನು ನಡೆಸಲು ಅನುಮತಿ ಕೋರಿ ನ್ಯಾಯಾಲಯಕ್ಕೆ ಪತ್ರ ಬರೆದು ಗುರುತಿನ ಕವಾಯತು ನಡೆಸಿರುತ್ತೇನೆ. ದಿನಾಂಕಃ 05.10.2023 ರಂದು ಚಾಸಾ.1 ರವರು ಹಾಜರುಪಡಿಸಿದ ಮೊಬೈಲ್ ಬಿಲ್ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಹಾಗೂ ಅವರ ಪುನಃ ಹೇಳಿಕೆ ಪಡೆದಿರುತ್ತೇನೆ. ದಿನಾಂಕ:16.10.2023 ರಂದು ಗುರುತಿನ ಕವಾಯತನ್ನು ನಡೆಸಿದ ಬಗ್ಗೆ ತಹಸೀಲ್ದಾರವರಿಂದ ವರದಿ ಪಡೆದುಕೊಂಡಿರುತ್ತೇನೆ. ಸದರಿ ಆರೋಪಿತರ ವಿರುದ್ಧ ಆರೋಪ ಸಾಭೀತಾಗಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಮೋಟಾರ್ ಸೈಕಲನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಿಟ್ಟುಕೊಟ್ಟು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿನಾಂಕಃ 30.11.2023 ರಂದು ಚಾಸಾ.1 ರವರಿಗೆ ಮೊಬೈಲನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ನಿಪಿ.1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.1 ಡಿ, ನಿಪಿ.1 ರಲ್ಲಿರುವ ಸಾಕ್ಷಿಯ ಸಹಿಯನ್ನು 2 ಡಿ, ಪಂಚನಾಕಾಲಕ್ಕೆ ತೆಗೆದ ಫೋಟೋಗಳು ನಿಪಿ.3, 4, ನಿಪಿ.5 ರಲ್ಲಿರುವ ಸಾಕ್ಷಿಯ ಸಹಿಯನ್ನು 5 ಸಿ, ಪಂಚನಾಕಾಲಕ್ಕೆ ತೆಗೆದ ಪೋಟೋಗಳು ನಿಪಿ.6, 7, ನಿಪಿ.8 ರಲ್ಲಿರುವ ಸಾಕ್ಷಿಯ ಸಹಿಯನ್ನು 8 ಸಿ, ನಿಪಿ.9 ರಲ್ಲಿರುವ ಸಾಕ್ಷಿಯ ಸಹಿಯನ್ನು 9 ಸಿ. ಪೋಟೋಗಳು ನಿಪಿ. 10 ಮತ್ತು 11, ಸಾರಿಗೆ ಅಧಿಕಾರಿಗಳು, ದಾವಣಗೆರೆರವರಿಗೆ ಬರೆದ ಪತ್ರ ನಿಪಿ. 13, ಸಾಕ್ಷಿಯ ಸಹಿಯನ್ನು 13 ಎ, ಬಿ ಎಕ್ಟ್ರಾಕ್ಟನ್ನು ನಿಪಿ 14, ಸಾಕ್ಷಿಯ ಸಹಿಯನ್ನು 14 ಎ, ಪಿಡಬ್ಲೂಡಿ ರವರಿಗೆ ಬರೆದ ಪತ್ರ ನಿಪಿ. 15, ಸಾಕ್ಷಿಯ ಸಹಿಯನ್ನು 15 ಎ, ತಹಸೀಲ್ದಾರವರು ನೀಡಿದ ಕವಾಯತ್ ವರದಿ ನಿಪಿ.16, ಸಾಕ್ಷಿಯ ಸಹಿಯನ್ನು 16 ಎ, ಆರೋಪಿತರ ಸ್ವಮುಷಿ ಹೇಳಿಕೆಗಳು ನಿಪಿ. 17, 18, ಸಾಕ್ಷಿಯ ಸಹಿಗಳು 17 ಎ, 18 ಎ, ಸಿಡಿ ನಿಪಿ 19, ಸಾಕ್ಷಿಯು 65 ಬಿ ಪ್ರಮಾಣ ಪತ್ರ ನಿಪಿ.20, ಸಾಕ್ಷಿಯ ಸಹಿಯನ್ನು 20 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ನೆಡದ ಸ್ಥಳದ ಪಂಚನಾಮೆ ಹಾಗೂ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.21 ಮತ್ತು 22 ಎಂದು ಗುರುತಿಸಲಾಯಿತು. ಸಾಕ್ಷಿಯು

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಹಾಗೂ ಮು.ಮಾ.ಗಳ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಆ.1:

ಆ.2:

ಪ್ರಶ್ನೆಃ 8 ನೀವು ಏನನ್ನಾದರೂ ಹೇಳಬಯಸುವಿರಾ?

ಉತ್ತರಃ ಆ.1:

ಆ.2:

ಪ್ರಶ್ನೆಃ 9 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ ಆ.1:

ಆ.2:

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ಸಹಿ/-

ದಿನಾಂಕಃ 11.08.2026 ಪ್ರಧಾನ ಸಿವಿಲ್ ನ್ಯಾಯಾಧೀಶರು

ಸ್ಥಳಃ ಹರಿಹರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,ಹರಿಹರ.